Lift Irrigation Scheme sanctioned to Umaraj in Bijapur District.

*Q.—243. Sri J. L. KABADI (Baradol).—

Will the Government be pleased to state:—

(*a*) whether it is a fact that though the Lift Irrigation Scheme was sanctioned to Umaraj in Bijapur district the work has not yet been completed;

(*b*) if so, the reasons for the same,

(*c*) whether they would take necessary steps to complete the work early?

*A.—Sri KONDAJJI BASAPPA (Deputy Minister for Co-operation).—

(*a*) Yes.

(*b*) For want of funds.

(*c*) The Society concerned is being advised to complete the remaining work at an early date.

ಶ್ರೀ ಜೆ. ಎಲ್. ಕಬಾಡಿ.—ಉಳಿದಿರುವ ಕಾಮಗಾರಿಯನ್ನು ಆದಷ್ಟು ಜಾಗ್ರತೆಯಾಗಿ ಪೂರ್ತಿ ಗೊಳಿಸಬೇಕೆಂದು ಸಂಬಂಧಪಟ್ಟ ಸಂಘಕ್ಕೆ ತಿಳಿಸಲು ಕ್ರಮ ಕೈಕೊಳ್ಳಲಾಗುತ್ತಿದ್ದೆ ಎಂದು ಹೇಳಿದ್ದಾರೆ. ಯಾವ ಯಾವ ಕೆಲಸ ಇನ್ನೂ ಪೂರ್ತಿ ಆಗದೆ ಉಳಿದಿದೆ ಗೊತ್ತೆ, ನ್ಯಾಮಿ?

ಶ್ರೀ ಕೊಂಡಜ್ಜಿ ಬಸಪ್ಪ.—ಸಿವಿಲ್ ಕಾಮಗಾರಿ ಪೂರ್ತಿಯಾಗಿದೆ ಎಂದು ಸಿವಿಲ್ ಇಂಜಿನಿಯರಿಂಗ್ ಇಲಾಖೆಯಿಂದ ಸರ್ಟಿಫಿಕೇಟ್ ಬೇಕಾಗಿದೆ. ಯಂತ್ರಗಳೆಲ್ಲ ಬಂದಿವೆ ಎಂದು ವ್ಯವಸಾಯ ಇಲಾಖೆಯಿಂದ ಸರ್ಟಿಫಿಕೇಟ್ ಬರಬೇಕು. ಆ ಕೆಲಸಕ್ಕೆ ಅಂದಾಜಾಗಿರುವುದು 1,11,000 ರೂಪಾಯಿಗಳು. ಅದರಲ್ಲಿ 93 ಸಾವಿರ ರೂಪಾಯಿನಷ್ಟು ಕೆಲಸವಾಗಿದೆ ಎಂದು ಗೊತ್ತಾಗಿದೆ. ಇಂಜಿನಿಯರಿಂಗ್ ಇಲಾಖೆ ಮತ್ತು ವ್ಯವಸಾಯ ಇಲಾಖೆಯ ಇಂಜಿನಿಯರಿಂದ ಸರ್ಟಿಫಿಕೇಟನ್ನು ಕೊಡಬೇಕು. ಅದನ್ನು ಕೊಟ್ಟರೆ ಉಳಿದಿರುವ ನಾರ್ನೂರು ಸಾವಿರ ರೂಪಾಯಿಗಳನ್ನು ಕೊಡಬಹುದು.

ಶ್ರೀ ಜೆ. ಎಲ್. ಕಬಾಡಿ.—ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಸೊಸೈಟಿಯವರು ಮೇಲಿಂದ ಮೇಲೆ ಒತ್ತಾಯಪಡಿಸಿದರೂ ಸಹಿತ ಅವರು ಹೋಗಿ ಇನ್‌ಸ್ಪೆಕ್ಷನ್ ಮಾಡದೆ ಇರುವುದರಿಂದ ಸರ್ಕಾರದಿಂದ ಗ್ರಾಂಟ್ ರಿಲೀಸ್ ಮಾಡುವುದಕ್ಕೆ ಆಗಿಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಸರ್ಟಿಫಿಕೇಟ್ ಬಂದರೆ ಕೊಡುತ್ತೇವೆ ಎಂದು ಬರೆದಿದ್ದೇವೆ.

ಶ್ರೀ ಎಚ್. ಡಿ. ದೇವೇ ಗೌಡ.—ಈ ಯೋಜನೆಗೆ ಯಾವ ಸೋರ್ಸ್‌ನಿಂದ ಹಣವನ್ನು ಒದಗಿಸಿದ್ದೀರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಬೊಂಬಾಯಿ ಸರ್ಕಾರದಲ್ಲಿ ಈ ಪ್ರಾಂತ ಇದ್ದಾಗ ಆದಂಥ ಯೋಜನೆ ಇದು. ಒಂದೊಂದು ಕಾಲದಲ್ಲಿ ಒಂದೊಂದು ರೀತಿಯ ಸಹಾಯವನ್ನು ಕೊಡುತ್ತಿದ್ದರು. ಮೊದಲು ಸೇಕಡ 50 ಭಾಗ ಸಾಲ, 50 ಭಾಗ ಸಬ್ಸಿಡಿ ಇತ್ತು. ಇದನ್ನು ರಿವೈಸ್ ಮಾಡಿ 1953 ರಲ್ಲಿ ಮೂರನೆ ಒಂದು ಭಾಗ ಸಾಲ, ಮೂರನೆ ಒಂದು ಭಾಗ ಸಬ್ಸಿಡಿ ಮತ್ತು ಮೂರನೆ ಒಂದು ಭಾಗ ಷೇರು ಬಂಡವಾಳ ಇರಬೇಕೆಂದು ಮಾಡಿದರು. ಇದಾದ ಮೇಲೆ ಪುನಃ ರಿವೈಸ್ ಮಾಡಿ 25 ಭಾಗ ಷೇರು ಬಂಡವಾಳ ಮತ್ತು 75 ಭಾಗ ಸಾಲ ಎಂದು ಮಾಡಿದರು. ಹೀಗೆ ಬೇರೆ ಬೇರೆ ಆರ್ಡರುಗಳನ್ನು ಬೊಂಬಾಯಿ ಸರ್ಕಾರದಲ್ಲಿ ಇದ್ದಾಗಲೇ ಮಾಡಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಈ ಸೊಸೈಟಿ ಮಾಡಿರುವ ಕೆಲಸವನ್ನು ನೋಡಲು ಸಿವಿಲ್ ಮತ್ತು ಅಗ್ರಿಕಲ್ಚರ್ ವಿಭಾಗಗಳ ಇಂಜನಿಯರುಗಳು ಹೋಗದೆ ಇರುವುದರಿಂದ, ಅಲ್ಲ ಆಗಿರುವ ಕೆಲಸವನ್ನು ಪರಿಶೀಲನೆ ಮಾಡದೆ ಇರುವುದರಿಂದ ಇಲ್ಲಿಯವರೆಗೂ ಸೊಸೈಟಿ ತೊಳಲಾಡುತ್ತಿದೆ. ಅವರು ನೋಡಿ ಸರ್ಟಿಫಿಕೇಟುಗಳನ್ನು ಕೊಡುವುದಕ್ಕೆ ಏನು ಮಾಡಿದ್ದೀರಿ?

Sri KONDAJJI BASAPPA.—Now that the Hon'ble Member has brought this to the notice of the Government, we will certainly take suitable steps to see that the certificates are issued.

ಶ್ರೀ ಬಿ. ಬೈರಪ್ಪಾಜಿ.—ಲಫ್ಟ್ ನೀರಾವರಿ ಯೋಜನೆಯನ್ನು ಮೈಸೂರು ದೇಶದಾದ್ಯಂತ ಜಾರಿಗೆ ತರುವಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವುದಕ್ಕೆ ಏನಾದರೂ ಏರ್ಪಾಡು ಮಾಡಿದೆಯೇ ಸ್ವಾಮಿ ?

Mr. SPEAKER.—Is it a supplementary ?

ಶ್ರೀ ಎಚ್. ಡಿ. ದೇವೇಗೌಡ.—ಆರ್ಥಿಕ ಸಹಾಯವನ್ನು ಕೊಡುವುದರ ಬಗ್ಗೆ ಬೊಂಬಾಯಿ ಸರ್ಕಾರ ತೆಗೆದುಕೊಂಡ ನಿಲುವನ್ನು ಹೇಳಿದರು. ನಮ್ಮ ರಾಜ್ಯ ಸರ್ಕಾರ ಲಫ್ಟ್ ಇರಿಗೇಷನ್ ಸೊಸೈಟಿಗಳಿಗೆ ಆರ್ಥಿಕ ಸಹಾಯ ಕೊಡತಕ್ಕದ್ದರ ಬಗ್ಗೆ ಅಂತಿಮವಾದ ನಿರ್ಧಾರವನ್ನು ತೆಗೆದು ಕೊಂಡಿದ್ದಾರೆಯೇ ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಇತ್ತೀಚೆಗೆ ಅದಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುತ್ತಿಲ್ಲ. ಆದ್ದರಿಂದ ಸರ್ಕಾರ ಈಗ ರಿವೈಸ್ ಮಾಡಬೇಕೆಂದು ಪರ್ಯಾಲೋಚನೆ ಮಾಡುತ್ತಿದೆ. ಸೇಕಡ 25 ಷೇರು ಬಂಡವಾಳಕ್ಕೆ ಬದಲಾಗಿ ಅದನ್ನು ಸೇಕಡ 10 ಎಂದು ಮಾಡಿ 25 ಭಾಗ ಸಬ್ಸಿಡಿ ಮತ್ತು 65 ಭಾಗ ಸಾಲದ ರೂಪದಲ್ಲಿ ಕೊಡಬೇಕು ಎನ್ನುವ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಜೆ. ಎಸ್. ಕಬಾಡಿ.—ಟೆಕ್ನಿಕಲ್ ಅಸಿಸ್ಟೆನ್ಸ್ ಸರ್ಟಿಫಿಕೇಟನ್ನು ಕೊಡದೆ ಇರುವುದರಿಂದ ಸೊಸೈಟಿಯವರಿಗೆ ಇಷ್ಟು ದಿವಸದಿಂದ ಹಣ ದೊರಕಿಲ್ಲ ಎನ್ನುವುದು ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—1964 ನೇ ಜುಲೈನಲ್ಲಿ ಎರಡು ಇರಾಖೆಗಳಗೂ ಸರ್ಟಿಫಿಕೇಟುಗಳನ್ನು ಕೊಡಲು ಬರೆದಿದ್ದೇವೆ. ಅವರು ಇನ್ನೂ ಕೊಟ್ಟಿಲ್ಲ ಎನ್ನುವುದು ಈಗ ಗೊತ್ತಾಗುತ್ತಿದೆ. ನಾವು ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಬ್ಬರೇ ಇಂಜಿನಿಯರು ಇಂಥ ಕೆಲಸಗಳಿಗೆ ಸರ್ಟಿಫಿಕೇಟನ್ನು ಕೊಡಬೇಕಾಗಿರುವುದರಿಂದ ಒಂದು, ಒಂದೂವರೆ, ಎರಡು ವರ್ಷ ತಡವಾಗುತ್ತಿದೆ; ಮತ್ತು ಇದರಿಂದ ಸೊಸೈಟಿಯ ಕೆಲಸ ಕಾರ್ಯಗಳಿಗೆ ಹಣವನ್ನು ಒದಗಿಸದೆ ಕೆಲಸ ನಿಧಾನವಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—It is a relevent suggestion for future consideration by the Government.

ಶ್ರೀ ಸಿದ್ದಯ್ಯ ಕಾಶೀಮಠ.—(ಬ) ಗೆ ಉತ್ತರವಾಗಿ 'ಹಣದ ಕೊರತೆಯಿಂದಾಗಿ' ಎಂದು ಹೇಳಿದ್ದಾರೆ. ಆಹಾರವನ್ನು ಹೆಚ್ಚಾಗಿ ಉತ್ಪಾದನೆ ಮಾಡಲು ಲಫ್ಟ್ ಇರಿಗೇಷನ್ ಸ್ಕೀಂ ಬೇಕಾಗಿದೆ. ಆದ್ದರಿಂದ ಉಮರಾಜಿಗೆ ಮಂಜೂರು ಮಾಡಿರುವ ಯೋಜನೆಗೆ ಹಣವನ್ನು ಈ ವರ್ಷವೇ ದೊರಕಿಸಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಆದಷ್ಟು ಬೇಗ ಸರ್ಟಿಫಿಕೇಟುಗಳನ್ನು ತರಿಸುವ ಪ್ರಯತ್ನ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇನೆ.

Programme to make use of rural manpower in the State.

*Q.—254. Sri S. SUBBIAH NAIK (Sullia).—

Will the Government be pleased to state :—

(*a*) whether they have chalked out any programme to make use of the rural manpower fully in the State ;

(*b*) if not, whether they would take action to include such a programme at least in the IV Five-Year Plan ?

A.—Sri RAMAKRISHNA HEGDE (Minister for Development, Panchayati Raj and Co-operation).—

(*a*) Yes.

(*b*) Does not arise in view of reply to clause (*a*) above.